16	Bellary District	54	Kadagali
		55	Hagaribommanahalli
		56	Sandur
		57	Siraguppa
17	Bangalore District	58	Hondenakalli, Anekal Tq.

ತುಮಕೂರು ಜಿಲ್ಲೆಯ ಡಿಸಿಸಿ ಬ್ಯಾಂಕಿನಲ್ಲಿ ಖಾಲಿ ಹುದ್ದೆಗಳಿಗೆ ಅರ್ಜಿ ಕರೆದಿರುವುದು

೧೭೧೧. ಶ್ರೀ ಜಿ.ಎಸ್. ಶಿವನಂಜಪ್ಪ (ಗುಬ್ಬಿ).—ಮಾನ್ಯ ಸಹಕಾರ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ) ತುಮಕೂರು ಜಿಲ್ಲೆಯ ಡಿಸಿಸಿ ಬ್ಯಾಂಕಿನಲ್ಲಿ ಖಾಲಿ ಹುದ್ದೆಗಳಿಗೆ ಅರ್ಜಿಗಳನ್ನು ಕರೆದಿದ್ದು ಯಾವಾಗ ?

ಆ) ಅ. ಪೈಕಿ ಭರ್ತಿ ಮಾಡಲಾಗಿರುವ ಹುದ್ದೆಗಳಾವುವು ? (ವರ್ಗವಾರು ವಿವರ ನೀಡುವುದು).—

ಇ) ಸದರಿ ಖಾಲಿ ಹುದ್ದೆಗಳನ್ನು ಭರ್ತಿ ಮಾಡುವಾಗ ಹಿಂದಿನ ತಾರೀಖಿನ ಆದೇಶ ಹೊರಡಿಸಿ ಕೆಲಸಕ್ಕೆ ನೇಮಿಸಿಕೊಂಡಿರುವ ವಿಚಾರ ಸರ್ಕಾರದ ಗಮನಕ್ಕೆ ಬಂದಿದೆಯೇ ?

ಈ) ಖಾಲಿ ಹುದ್ದೆಗಳಿಗೆ ಆಯ್ಕೆ ಮಾಡುವಾಗ ಭ್ರಷ್ಟಾಚಾರ ನಡೆದಿರುವ ಬಗ್ಗೆ ಸಾರ್ವಜನಿಕರು ಹಾಗೂ ಪತ್ರಿಕೆಗಳಲ್ಲಿ ದೂರು ಬಂದಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ?

ಉ) ಹಾಗಿದ್ದಲ್ಲಿ ಈ ಬಗ್ಗೆ ಸರ್ಕಾರದವರು ಕೈಗೊಂಡಿರುವ ಕ್ರಮವೇನು ? ಹಾಗಿದ್ದಲ್ಲಿ ಯಾವಾಗ ಕ್ರಮ ಕೈಗೊಳ್ಳಲಾಗುವುದು ?

ಶ್ರೀ ಹೆಚ್. ವಿಶ್ವಾನಂತಯ್ಯ (ಸಹಕಾರ ಮಂತ್ರಿಗಳು).—

ಅ) ದಿನಾಂಕ ೨-೫-೮೬ರಂದು ಅರ್ಜಿಗಳನ್ನು ಕರೆಯಲಾಯಿತು.

ಆ)

ನಂ.	ಹುದ್ದೆಗಳ ವಿವರ	ಮೀಸಲಾತಿಗಳು								ಒಟ್ಟು
		ಎಸ್.ಸಿ.	ಎಸ್.ಟಿ.	ವರ್ಗ					ಸಾಮಾನ್ಯ ಅರ್ಹತೆ	
				ಎ	ಬಿ	ಸಿ	ಡಿ	ಇ		
೧	೨	೩	೪	೫	೬	೭	೮	೯	೧೦	೧೧
೧.	೧ನೇ ದರ್ಜೆಗುಮಾಸ್ತ	೨	೧	೧	೨	೧	೧	೧	೩	೧೨
೨.	೨ನೇ ದರ್ಜೆಗುಮಾಸ್ತ	೨	೧	೧	೧	೧	೧	೧	೩	೧೧
೩.	ಸಹಾಯಕರು	೨	೧	೧	೧	–	–	–	೨	೭
೪.	ವಾಹನ ಚಾಲಕರು	–	೧	–	–	–	೧	–	–	೨
೫.	ಟೈಪಿಸ್ಟ್	೧	–	–	–	–	೧	–	–	೨
		೭	೪	೩	೪	೨	೪	೨	೮	೩೪

ಇ) ಇಲ್ಲ.

ಈ) ಬಂದಿದೆ.

ಉ) ಈ ವಿಷಯದ ಬಗ್ಗೆ ವಿಚಾರಣೆ ನಡೆಸಿ ಸೂಕ್ತ ಕ್ರಮ ಕೈಗೊಳ್ಳಲಾಗುವುದು.

ಚುಕ್ಕೆ ಗುರುತಿಲ್ಲದ ಪ್ರಶ್ನೆಗಳಿಗೆ ಲಿಖಿತ ಮೂಲಕ ನೀಡಲಾದ ಉತ್ತರಗಳು

ಶ್ರೀ ಎ. ಲಕ್ಷ್ಮೀಸಾಗರ್.—ಅಧ್ಯಕ್ಷರೇ, ಲಿಖಿತ ಮೂಲಕ ಉತ್ತರಿಸುವ ಇಪ್ಪತ್ತೈದಂಟನೇ ಪಟ್ಟಿಯನ್ನು ಸಭೆಯ ಮುಂದೆ ಇಡುತ್ತೇನೆ.

ಅಧ್ಯಕ್ಷರು.—ಪ್ರಶ್ನೋತ್ತರ ಪಟ್ಟಿ ಸಭೆಯ ಮುಂದಿಡಲಾಯಿತು.

ಮುಜರಾಯಿ ದೇವಸ್ಥಾನಗಳಲ್ಲಿ ಅರ್ಚಕರ ನೇಮಕಾತಿ ಬಗ್ಗೆ

೧೭೫೦. ಶ್ರೀ ಎಂ. ಶಿವಣ್ಣ (ಹೆಗ್ಗಡದೇವನ ಕೋಟೆ).—ಮಾನ್ಯ ಧಾರ್ಮಿಕ ಮತ್ತು ಪತ್ತಿ ಹಾಗೂ ನಿಯಂತ್ರಿಕ ಮಾರಂಟ್ಟಿ ಮತ್ತು ಖುಷ್ಕಿ ಜಮೀನು ಅಭಿವೃದ್ಧಿ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ) ರಾಜ್ಯದಲ್ಲಿರುವ ಮುಜರಾಯಿ ದೇವಸ್ಥಾನಗಳೆಷ್ಟು ?

ಆ) ದೇವಸ್ಥಾನದ ಅರ್ಚಕರಿಗೆ ಸರ್ಕಾರದಿಂದ ನೀಡುತ್ತಿರುವ ಸೌಲಭ್ಯಗಳೇನು ?

ಇ) ದೇವಸ್ಥಾನದ ಅರ್ಚಕರಲ್ಲಿ ಪರಿಶಿಷ್ಟ ಜಾತಿ ವರ್ಗದ ಜನರಿದ್ದಾರೆಯೇ. (ಜಿಲ್ಲಾವಾರು ವಿವರ ನೀಡುವುದು) ?

ಈ) ಮುಜರಾಯಿ ದೇವಸ್ಥಾನಗಳಿಗೆ ಪರಿಶಿಷ್ಟ ಜಾತಿ ವರ್ಗದ ಅರ್ಚಕರನ್ನು ನೇಮಿಸಲು ಸರ್ಕಾರದವರು ಉದ್ದೇಶಿಸಿದ್ದಾರೆಯೆ ?

ಶ್ರೀ ಕೆ. ಅಮರನಾಥ ಶೆಟ್ಟಿ (ಮುಜರಾಯಿ ರಾಜ್ಯ ಸಚಿವರು).—

ಅ) ೪೦,೨೮೦

ಆ) ಆಯಾ ದೇವಸ್ಥಾನದ ಆದಾಯಕ್ಕನು ಗುಣವಾಗಿ, ನಿಗದಿತ ಸಂಬಳ ಮತ್ತು ಸೇವಾರ್ಥದಲ್ಲಿ ಕಮಿಷನ್ ಹಾಗೂ ಕೆಲವಡೆಗಳಲ್ಲಿ ವಸತಿ ಸೌಕರ್ಯ ಕಲ್ಪಿಸಲಾಗುವುದು.

ಇ) ಇದ್ದಾರೆ. ವಿವರ ಪಟ್ಟಿ ಲಗತ್ತಿಸಿದೆ.

ಈ) ಅವಕಾಶವಿದ್ದಲ್ಲಿ ಮಾಡಲಾಗುತ್ತಿದೆ.